ಕಾಡಿನಲ್ಲಿರುವ ಸಂಗತಿ ಅವನನ್ನು ಮತ್ತಷ್ಟು ರೋಮಾಂಚನಗೊಳಿಸಿತು. ತನ್ನ ಪೂರ್ವಜರ ಆಸೆಯನ್ನು ಪೂರೈಸುವ ಅವಕಾಶ ಹತ್ತಿರದಲ್ಲಿದೆ ಎಂದು ಮತ್ತು ಅದು ತನ್ನಿಂದಲೇ ಪೂರ್ಣಗೊಳ್ಳುತ್ತಿದೆಯೆಂದು ಬ್ರಹ್ಮದತ್ತ ಸಂಭ್ರಮಿಸಿದ. ಆ ಖುಷಿಯಲ್ಲಿ ಹದಿನೈದು ದಿನಗಳ ರಜೆ ಪಡೆದು ಪಶ್ಚಿಮ ಘಟ್ಟಗಳ ಸೆರಗಿನಲ್ಲಿರುವ ಆ ಸಾವನ್ನೆ ಕಾಣದ ಜನರಿರುವ ಊರನ್ನು ಹುಡುಕಿ ಹೊರಟ.

★★★

ಬ್ರಹ್ಮದತ್ತ ಬಸ್ಸಿನಿಂದಿಳಿದಾಗ ಅದೇ ಆಗ ಸೂರ್ಯ ಪಶ್ಚಿಮ ಘಟ್ಟದ ಬೆಟ್ಟಗಳಲ್ಲಿ ಅಸ್ತಮಿಸುತ್ತಿದ್ದ. ಬಸ್ಸಿನ ನಿರ್ವಾಹಕ ಇಲ್ಲಿಂದ ನಾಲ್ಕೈದು ಕಿಲೋಮೀಟರ್ ನಡೆದುಕೊಂಡು ಹೋದರೆ ಆ ಸಾವಿಲ್ಲದ ಊರು ಸಿಗುವುದಾಗಿ ಹೇಳಿ ಬ್ರಹ್ಮದತ್ತನನ್ನು ಬಸ್ಸಿನಿಂದ ಇಳಿಸಿ, ಜೊತೆಗೆ ಕಾಡಿನ ದಾರಿಯಲ್ಲಿ ಕ್ರೂರ ಮೃಗಗಳಿರುತ್ತವೆ ಎನ್ನುವ ಎಚ್ಚರಿಕೆ ನೀಡಿ ಹೊರಟು ಹೋದ. ಈಗ ಬಸ್ಸಿನ ಸಪ್ಪಳ ಇರಲಿಲ್ಲ. ಜೋರಾಗಿ ಬೀಸುವ ಗಾಳಿಯ ಸದ್ದು ಬಿಟ್ಟರೆ ಜೀವಿಗಳ ಸಂಪರ್ಕವೇ ಇಲ್ಲವೇನೋ ಎನ್ನುವವಂತೆ ಆ ಜಾಗದಲ್ಲಿ ನೀರವ ಮೌನವಿತ್ತು. ಬ್ರಹ್ಮದತ್ತ ಬಸ್ಸಿನ ನಿರ್ವಾಹಕ ಸೂಚಿಸಿದ ಕಾಲುದಾರಿ ಹಿಡಿದು ಕತ್ತಲಾಗುವ ಮುಂಚೆ ಊರು ಸೇರಿಕೊಳ್ಳಬೇಕೆಂದು ಅವಸರವಸರವಾಗಿ ಹೊರಟ. ಅವನು ಸ್ವಲ್ಪ ದೂರ ನಡೆದಿರಬಹುದು, ಹೆಜ್ಜೆಯ ಸಪ್ಪಳ ಕೇಳಿಸಿದಂತಾಗಿ ಹಿಂತಿರುಗಿ ನೋಡಿದ. ಮನುಷ್ಯಾಕೃತಿಯೊಂದು ತನ್ನತ್ತಲೇ ನಡೆದು ಬರುತ್ತಿರುವುದು ಕಾಣಿಸಿ ಹೆಜ್ಜೆಯನ್ನು ನಿಧಾನಗೊಳಿಸಿದ. ಹತ್ತಿರ ಬಂದ ವ್ಯಕ್ತಿ ಬ್ರಹ್ಮದತ್ತನನ್ನು ನೋಡಿ ಮುಗುಳ್ನಕ್ಕು ತನ್ನ ಹೆಸರು ವೆಂಕಟ್ರಮಣನೆಂದು, ಸಾವಿಲ್ಲದ ಊರಲ್ಲಿ ಸಣ್ಣ ದಿನಸಿ ಅಂಗಡಿಯನ್ನು ನಡೆಸುತ್ತಿರುವುದಾಗಿಯೂ ಪೇಟೆಯಲ್ಲಿನ ಕೆಲಸ ಮುಗಿಸಿಕೊಂಡು ಊರಿಗೆ ಹಿಂತಿರುಗುತ್ತಿರುವುದಾಗಿಯೂ ಪರಿಚಯಿಸಿಕೊಂಡ. ಪೀಚುಪೀಚಾದ ಸಣಕಲು ದೇಹದ ವೆಂಕಟ್ರಮಣನನ್ನು ನೋಡುತ್ತಿದ್ದರೆ ಬ್ರಹ್ಮದತ್ತನಿಗೆ ತನ್ನೂರಿನ ಅರ್ಚಕರ ನೆನಪಾಯಿತು. ದಾರಿಯಲ್ಲಿ ಮಾತನಾಡುವುದಕ್ಕೆ ಜೊತೆಯಾಯಿತೆಂದು ಖುಷಿಪಟ್ಟ ಬ್ರಹ್ಮದತ್ತ ತನ್ನ ಪರಿಚಯ ಮಾಡಿಕೊಂಡು ಇಲ್ಲಿಗೆ ಬಂದ ಉದ್ದೇಶ ಹೇಳಿದ. 'ಅಂತೂ ನನ್ನೂರು ನಿಮಗೆಲ್ಲ ಕುತೂಹಲದ ಕೇಂದ್ರವಾಗಿದೆ ಅನ್ನಿ' ಎಂದ ವೆಂಕಟ್ರಮಣ ಬ್ರಹ್ಮದತ್ತನ ಅನೇಕ ಅನುಮಾನಗಳಿಗೆ ಉತ್ತರಿಸುತ್ತ. ಅವರು ಊರು ಸಮೀಪಿಸುವಷ್ಟರಲ್ಲಿ ಬೆಳಕು ಮರೆಯಾಗಿ ಇಡೀ ಊರು ಕತ್ತಲಿನ ಸೆರಗಿನಲ್ಲಿ ಅವಿತು ಕುಳಿತುಕೊಂಡಿತ್ತು.

ಊರಿಗೆ ಹೊಸಬನಾಗಿದ್ದ ಬ್ರಹ್ಮದತ್ತನನ್ನು ವೆಂಕಟ್ರಮಣ ತನ್ನ ಮನೆಗೆ ಕರೆದೊಯ್ದು. ಕುಡಿಯಲು ನೀರು ಕೇಳಿದ ಬ್ರಹ್ಮದತ್ತನಿಗೆ ಅದೇಕೋ ವೆಂಕಟ್ರಮಣ ಅನುಮಾನಿಸುತ್ತಿರುವಂತೆ ಅನಿಸಿತು. ತೀರ ಸಂಪ್ರದಾಯಸ್ಥ ಕುಟುಂಬವಾಗಿರುವುದರಿಂದ ತನ್ನನ್ನು ಸತ್ಕರಿಸಲು ಸಹಜವಾಗಿಯೇ ಹಿಂಜರಿದಿರಬಹುದು ಎಂದು ಭಾವಿಸಿದವನಿಗೆ ಮುಂದಿನ ಕೆಲವೇ ಕ್ಷಣಗಳಲ್ಲಿ ಆ ಮನೆಯಲ್ಲಿ ದೊರೆತ ಅತಿಥಿ ಸತ್ಕಾರದಿಂದ ಒಂದುರೀತಿಯ ನಾಚಿಕೆಯ ಭಾವ ಆವರಿಸಿತು. ಊಟದ ನಂತರ ಮಹಡಿಯಲ್ಲಿ ಹಾಸಿಗೆ ಹಾಸಿಕೊಟ್ಟು ಬ್ರಹ್ಮದತ್ತನಿಗೆ ವಿಶ್ರಾಂತಿ ತೆಗೆದುಕೊಳ್ಳಲು ಹೇಳಿದ ವೆಂಕಟ್ರಮಣ, 'ಈಗಾಗಲೇ ಪ್ರಯಾಣದಿಂದ ನಿಮಗೆ ಆಯಾಸವಾಗಿದೆ. ಬೇಗ ಮಲಗಿಕೊಳ್ಳಿ. ಬೆಳಗ್ಗೆ ಮಾತನಾಡಿದರಾಯ್ತು. ಈ ಊರನ್ನು ರಾತ್ರಿ ನೋಡುವುದಕ್ಕಿಂತ ಹಗಲಿನ ಬೆಳಕಲ್ಲೇ ನೀವು ನೋಡಬೇಕು' ಎಂದು ಕೆಳಗಿಳಿದು ಹೋದ. ಪ್ರಯಾಣದ ಆಯಾಸ ಮತ್ತು ಹೊಟ್ಟೆ ತುಂಬ ಮಾಡಿದ ಊಟದಿಂದ ಬ್ರಹ್ಮದತ್ತನಿಗೆ ನಿದ್ದೆ ಬೇಗ ಹತ್ತಿತು.

ಬೆಳಗ್ಗೆ ಎಚ್ಚರವಾಗಿ ಕೆಳಗೆ ಇಳಿದು ಹೋದ ಬ್ರಹ್ಮದತ್ತನಿಗೆ ಮನೆಯ ಅಂಗಳದಲ್ಲಿ ಸಾಲಾಗಿ ಹತ್ತರಿಂದ ಹದಿನೈದು ವೃದ್ಧರು ಬಿಸಿಲಿಗೆ ಮೈ ಕಾಯಿಸುತ್ತ ಕುಳಿತಿರುವ ದೃಶ್ಯ ಕಣ್ಣಿಗೆ ಬಿತ್ತು. ಹಣ್ಣಾದ ದೇಹ, ಮಡಿಕೆಗಟ್ಟಿ ಸುಕ್ಕಾದ ಚರ್ಮ, ಕಾಂತಿಕಳೆದುಕೊಂಡ ಕಣ್ಣುಗಳು, ಹಲ್ಲಿಲ್ಲದ